ಇ. ಕಾವೇರಿ ನೀರು ಸರಬರಾಜು ಮಾಡುವ 2ನೇ ಹಂತದ ಯೋಜನೆಯು ಪೂರ್ಣಗೊಂಡಿದ್ದು ನವೆಂಬರ್ 2000ರಲ್ಲಿ ಚಾಲನೆಗೊಳಿಸಲಾಗಿದೆ. ಈ ಯೋಜನೆಯು ವ್ಯಾಪ್ತಿಗೆ ಒಳಪಡಿಸುವ ನಗರದ ಪ್ರದೇಶಗಳ ಜನತೆಗೆ ಈಗ ಸಾಕಾಗುವಷ್ಟು ನೀರು ಸರಲರಾಜಾಗುತ್ತಿದೆ. 4 ಗಂಟೆಗಳ ವಿದ್ಯುತ್‌ಶಕ್ತಿ ಕಡಿತವಿದಾಗ್ಯೂ ದಿನಂಪ್ರತಿ 12.0 ದಶಲಕ್ಷ ಲೀಟರ್ ಶುದ್ಧ ನೀರನ್ನು ನಗರಕ್ಕೆ ಒದಗಿಸಲಾಗುತ್ತಿದೆ. ಮುಂಜಾಗರೂಕತಾ ಕ್ರಮವಾಗಿ ಕಾವೇರಿ ನದಿಯಲ್ಲಿ ಮರಳಿನ ಚೀಲಗಳಿಂದ ತಡೆಗೋಡೆ ಮಾಡಿನೀರಿನ ಮಟ್ಟವನ್ನು ಹೆಚ್ಚಿಸಲಾಗಿದೆ. ಇದಲ್ಲದೆ ನಗರದ ವ್ಯಾಪ್ತಿಗೆ ಹೊಸದಾಗಿ ಒಳಪಟ್ಟು ಪ್ರದೇಶಗಳಿಗೆ ನೀರು ಸರಬರಾಜು ಮಾಡುವ ಉದ್ದೇಶದಿಂದ ಕೊಳವೆ ಬಾವಿಗಳನ್ನು ತೋಡುವ ಹಾಗೂ ಕೊಳವೆ ಮಾರ್ಗ ವಿಸ್ತರಿಸುವ ಕಾಮಗಾರಿಯ ರೂ 79.60 ಲಕ್ಷಗಳ ಪ್ರಸ್ತಾವನೆಯನ್ನು ಕನನೀಸ ಮತ್ತು ಒಳಮಂಡಲಿಯಿಂದ ಮಂಡ್ಯದ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿದ್ದು. ಈ ಹಣ-ಬಿಡುಗಡೆಯಾಗಿದೆ ಕೊಡಲೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಮಂಡ್ಯ ನಗರದಲ್ಲಿನ ಪೂರ್ವ ಪೊಲೀಸ್ ಠಾಣೆಗೆ ಸ್ವಂತ ಕಟ್ಟಡದ ಸೌಲಭ್ಯ

120(178) ಶ್ರೀ ಎಂ.ಎಸ್ ಆತ್ಮಾನಂದ(ಮಂಡ್ಯ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ. ಮಂಡ್ಯ ನಗರದಲ್ಲಿ ಪೂರ್ವ ಪೊಲೀಸ್ ಠಾಣೆಗೆ ಕಟ್ಟಡ ನಿರ್ಮಾಣದ ಅವಶ್ಯಕತೆ ಇರುವುದು ಸರ್ಕಾರವು ಆಲೋಚಿಸಿದೆಯೆ.

ಆ. ಹಾಗಿದ್ದಲ್ಲಿ ಕಟ್ಟಡದ ಸೌಲಭ್ಯವನ್ನು ಒದಗಿಸಲು ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ಮಲ್ಲಿಕಾರ್ಜುನಖರ್ಗೆ (ಗೃಹ ಸಚಿವರು)

ಅ. ಹೌದು

ಆ. ಮಂಡ್ಯ ಪೂರ್ವ ಪೊಲೀಸ್ ಠಾಣೆಯನ್ನು ಮತ್ತು ಸಂಚಾರಿ ಪೊಲೀಸ್ ಠಾಣೆಯನ್ನು ರೂ 25.67 ಲಕ್ಷ ವೆಚ್ಚದಲ್ಲಿ ನಿರ್ಮಿಸಲು ಶ್ರೀ .ಎಸ್. ದಾಮೋದರ ರಾಜು ಎಂಬುವರಿಗೆ ಗುತ್ತಿಗೆಯನ್ನು ನೀಡಲಾಗಿದೆ. ಹಾಗೂ ಕಾಮಗಾರಿಯು ಪ್ರಗತಿಯಲ್ಲಿದ್ದು ದಿನಾಂಕ : 30-11-03 ರೊಳಗೆ ಪೂರ್ಣ ಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ.

ರಾಜ್ಯದ ಮಹಾನಗರ ಪಾಲಿಕೆಗಳ ವಿವರ

122(102) ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ. ಧಾರವಾಡ- ಹುಬ್ಬಳ್ಳಿ ಮಹಾನಗರವು ಕರ್ನಾಟಕದ 2ನೇ ಅತಿದೊಡ್ಡ ಮಹಾನಗರ ಸಭೆಯಾಗಿರುವುದು ನಿಜವೇ?

ಆ. ನಿಜವಿದ್ದಲ್ಲಿ ಮಹಾನಗರ ಸಭೆಗೆ ಸರ್ಕಾರ ನೀಡುತ್ತಿರುವ ಅನುದಾನ ಮೊತ್ತ ಎಷ್ಟು? (ಯೋಜನಾವಾರು ವಿವರ ಒದಗಿಸುವುದು)

ಇ. ಅದೇ ರೀತಿ ರಾಜ್ಯದ ಇತರೆ ಮಹಾನಗರ ಪಾಲಿಕೆಗೆ ನೀಡುವ ವಿವಿಧ ಅನುದಾನಗಳೆಷ್ಟು? (ಕಳೆದ 3 ವರ್ಷಗಳ ಪೂರ್ಣ ವಿವರ ನೀಡುವುದು)

ಈ. ಈ ಎಲ್ಲಾ ಮಹಾನಗರ ಪಾಲಿಕೆಗಳ ಕುಡಿಯುವ ನೀರಿನ ವ್ಯವಸ್ಥೆ ಯಾವ ರೀತಿ ಇದೆ ಪ್ರತಿ ನಿತ್ಯ ಕುಡಿಯುವ ನೀರು ಪೂರೈಕೆ ಯಾಗುತ್ತಿದೆಯೇ ನೀರಿನ ಕೊರತೆ ಯಾವ

ನಗರಪಾಲಿಕೆಯಲ್ಲೂ ಉಂಟಾಗಿಲ್ಲವೇ? ಮತ್ತು ಪ್ರತಿ ಮಹಾನಗರಪಾಲಿಕೆಯ ಜನಸಂಖ್ಯೆ ವಿವರ ನೀಡುವಿರಾ;

ಉ. ಪ್ರತಿ ಮಹಾನಗರ ಒಳಚರಂಡಿ ಯೋಜನೆಯು ಸಮರ್ಪಕವಾಗಿದೆಯೇ, ಇದ್ದರೆ ಯಾವ ಪ್ರಮಾಣದಲ್ಲಿದೆ ಪ್ರತಿಮಹಾನಗರದ ಮುಂದಿರುವ ಒಳಚರಂಡಿ ಮತ್ತು ಕುಡಿಯುವ ನೀರಿನ ಯೋಜನೆಗಳ ವಿವರವಾದ ಮಾಹಿತಿ ನೀಡಿ?

ಶ್ರೀ ಡಿ.ಕೆ.ಶಿವಕುಮಾರ್(ನಗರಾಭಿವೃದ್ದಿ ಸಚಿವರು).

ಅ. ಹೌದು.

ಆ. ರೂ 1,99,17,000-00 ಗಳನ್ನು ಎಸ್.ಎಫ್.ಸಿ. ಅನುದಾನದ ಮೂಲಕ ಪ್ರತಿ ತಿಂಗಳು ವೇತನ ಪಾವತಿಗಾಗಿ ಬಿಡುಗಡೆ ಮಾಡುತ್ತಿದೆ.

ಇ. ರಾಜ್ಯದ ಇತರೆ ಮಹಾನಗರ ಪಾಲಿಕೆಗಳಿಗೆ ಕಳೆದ 3 ವರ್ಷಗಳಿಂದ ನೀಡಿರುವ ವಿವಿಧ ಅನುದಾನದ ವಿವರ ಈ ಕೆಳಕಂಡಂತಿದೆ.

ಎಸ್ಎಫ್ಸಿ ಅನುದಾನದ ವಿವರ(ರೂ ಲಕ್ಷಗಳಲ್ಲಿ)

ಮಹಾನಗರ ಪಾಲಿಕೆಯ ಹೆಸರು	1999-2000	2000-2001	2001-2002
ಬೆಳಗಾಂ	1447.39	1423.80	1113.59
ಮಂಗಳೂರು	990.83	990.96	989.73
ಗುಲ್ಬರ್ಗಾ	819.83	819.96	189.96
ಮೈಸೂರು	1234.87	1388.00	1339.04
ಬೆಂಗಳೂರು	9023.62	8863.23	8050.41

ಮಹಾನಗರ ಪಾಲಿಕೆಯ ಹೆಸರು	ಜನಸಂಖ್ಯೆ ಲಕ್ಷಗಳಲ್ಲಿ	ನೀರು ಸರಬರಾಜು ವ್ಯವಸ್ಥೆ
ಬೆಳಗಾಂ	4.50	ಅಲ್ಪ ಪ್ರಮಾಣ ಅಭಾವವಿದೆ. ಎರಡು ದಿನ ಕ್ಕೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ.
ಮಂಗಳೂರು	4.18	ಪ್ರತಿದಿನ ನೀರು ಸರಬರಾಜು ಮಾಡಲಾಗುತ್ತಿದೆ.
ಗುಲ್ಬರ್ಗಾ	4.30	ನೀರಿನ ಕೊರತೆ ಇದೆ, 2 ದಿನಕ್ಕೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ.
ಹುಬ್ಬಳ್ಳಿ ಧಾರವಾಡ	7.86	ನೀರಿನ ಕೊರತೆ ಇದೆ. ಪ್ರತಿ 7 ದಿನಕ್ಕೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ.
ಮೈಸೂರು	7.85	ನೀರಿನ ವ್ಯವಸ್ಥೆ ಸಮರ್ಪಕವಾಗಿದೆ. ಪ್ರತಿದಿನ ನೀರು ಸರಬರಾಜು ಮಾಡಲಾಗುತ್ತಿದೆ.
ಬೆಂಗಳೂರು	42.92	ನೀರಿನ ಕೊರತೆಯಿದೆ ಎರಡು ದಿನಗಳಿಗೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ.

ಉ. ಬೆಳಗಾಂ ಮಹಾನಗರ ಪಾಲಿಕೆ

ಒಳಚರಂಡಿ ಯೋಜನೆ ಸಮರ್ಪಕವಾಗಿದೆ.ಇದು ಹಳೆಯದಾಗಿದ್ದು ಒಳಚರಂಡಿ ಮತ್ತು ನೀರು ಸರಬರಾಜು ಬಗ್ಗೆ ರೂ 130.00 ಕೋಟಿ ವೆಚ್ಚದಲ್ಲಿ ದುರಸ್ತಿ ಕಾಗೂ ನೀರು ಸರಬರಾಜು ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಮಂಗಳೂರು ಮಹಾನಗರ ಪಾಲಿಕೆ.

ಒಳಚರಂಡಿ ವ್ಯವಸ್ಥೆ ಸಮರ್ಪಕವಾಗಿಲ್ಲ ಎ.ಡಿ.ಬಿ ಯೋಜನೆಯಡಿ ರು ೨ 137.00 ಕೋಟಿಗಳ ವೆಚ್ಚದಲ್ಲಿ ಸೂಕ್ತಕ್ರಮ ಕೈಗೊಳ್ಳಲಾಗುತ್ತಿದೆ ಎ.ಡಿ.ಬಿ. ಆರ್ಥಿಕ ನೆರವಿನಿಂದ ಕೆ.ಸಿ.ಇ . ಎಂ. ಯು.ಡಿ.ಪಿ.ಓ ಯೋಜನೆಯಡಿಯಲ್ಲಿ ಕೆ.ಯು.ಐ.ಡಿ.ಎಫ್.ಸಿ ಇಲಾಖಾ ವತಿಯಿಂದ ನೀರು ಸರಬರಾಜು ಬಗ್ಗೆ ಹೊಸ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ

ಗುಲ್ಬರ್ಗಾ ನಗರ ಪಾಲಿಕೆ

ಒಳಚರಂಡಿ ಯೋಜನೆ ಸಮರ್ಪಕವಾಗಿಲ್ಲ ರೂ. 1662.53 ಲಕ್ಷಗಳ ಮುಖ್ಯಮಂತ್ರಿಗಳ ವಿಶೇಷ ಪ್ಯಾಕೇಜ್ ಅಡಿಯೋಜನೆ ಮಂಜೂರಾಗಿದ್ದು ಕ್ರಮ ಕೈಗೊಳ್ಳಲಾಗುತ್ತಿದೆ ಕುಡಿಯುವ ನೀರಿನ ಪೂರೈಕೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಪ್ಯಾಕೇಜ್ ಯೋಜನೆಯಡಿ 5700.00 ಲಕ್ಷರೂಗಳು ಮಂಜೂರಾಗಿದ್ದು ಕಾಮಗಾರಿ ಪ್ರಗತಿಯಲ್ಲಿದೆ.

ಹುಬ್ಬಳ್ಳಿ - ಧಾರವಾಡ ನಗರಪಾಲಿಕೆ

ಒಳಚರಂಡಿ ವ್ಯವಸ್ಥೆ ಯೋಜನೆ ಸಮರ್ಪಕವಾಗಿಲ್ಲ ಸಮರ್ಪಕ ರೀತಿಯ ವ್ಯವಸ್ಥೆ ಬಗ್ಗೆ ಯೋಜನೆಯನ್ನು ತಯಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕುಡಿಯುವ ನೀರಿನ ಸಮರ್ಪಕ ವಿತರಣೆ ಬಗ್ಗೆ ಯೋಜನೆಯನ್ನು ತಯಾರಿಸಲಾಗುತ್ತಿದೆ.

ಮೈಸೂರು ಮಹಾನಗರ ಪಾಲಿಕೆ

ಒಳಚರಂಡಿ ಯೋಜನೆ ಸಮರ್ಪಕವಾಗಿದೆ. ನೀರು ಸರಬರಾಜು ಬಗ್ಗೆ ಯೋಜನೆಗಳನ್ನು ಅನುಷ್ಠಾನ ಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಬೆಂಗಳೂರು ಮಹಾನಗರ ಪಾಲಿಕೆ

ಒಳಚರಂಡಿ ಮತ್ತು ನೀರು ಸರಬರಾಜು ವ್ಯವಸ್ಥೆ ಸಮರ್ಪಕವಾಗಿದೆ. ಹೊಸವಾರ್ಡ್ ಗಳಿಗೆ ಕುಡಿಯುವ ನೀರನ್ನು ಮತ್ತು ಒಳಚರಂಡಿ ವ್ಯವಸ್ಥೆ ಒದಗಿಸಲು 113.34 ಕೋಟಿ ರೂಗಳು ಭಾಗಶಃ ಹೊಸ ವಾರ್ಡಗಳಿಗೆ 19.70 ಕೋಟಿ ರೂಗಳು ಹಳೇ ವಾರ್ಡ್‌ಗಳಿಗೆ 04.09 ಕೋಟಿ ರೂ.ಗಳು ವೆಚ್ಚದ ಕಾಮಗಾರಿಗಳನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮೂಲಕ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಧಾರವಾಡ ಬಸ್ ನಿಲ್ದಾಣದ ಕಾಮಗಾರಿ

123(403) ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ(ಧಾರವಾಡ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ. ಧಾರವಾಡದ ಮುಖ್ಯ ಬಸ್ ನಿಲ್ದಾಣದ ಕಟ್ಟಡದ ಕೆಲಸ ಯಾವಾಗ ಮುಗಿಸಬೇಕಾಗಿದೆ; ಸದರಿ ಕಟ್ಟಡಕ್ಕೆ ವೆಚ್ಚ ಮಾಡುವ ಹಣ ಎಷ್ಟು? ಇದರಲ್ಲಿ ಬರುವ ಪ್ಲಾಟ್‌ಫಾರ್ಮ್‌ಗಳು ಹಾಗೂ ವಾಹನಗಗಳು ನಿಲ್ಲುವ ಸಂಖ್ಯೆ ಎಷ್ಟು;